ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ ***13-03-2018***

***ಮುಂದುವರಿದ ಮುಖ್ಯ ವಿಚಾರಣೆಃ – ಪ್ರತಿವಾದಿಪರ ಶ್ರೀ ಎನ್.ಆರ್.ಡಿ. ವಕೀಲರಿಂದಃ-***

ನಾನು ದಿನಾಂಕ 14-11-2013 ರಂದು ಕರ್ನಾಟಕ ಸರ್ಕಾರ ಸಾರಿಗೆ ಇಲಾಖೆಯವರು ನೀಡಿದ ಹಿಂಬರಹವನ್ನು ಹಾಜರುಪಡಿಸುತ್ತಿದ್ದು, ಅದನ್ನು ನಿಡಿ.11 ಎಂದು ಗುರುತಿಸಲಾಯಿತು. ದಿನಾಂಕ 26-08-2015 ರಂದು ಪಂಚಾಯತ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತಿ, ಮಾಜಾಳಿಯವರು ನೀಡಿದ ಅನಾಕ್ಷೇಪಣಾ ಪತ್ರವನ್ನು ಹಾಜರುಪಡಿಸುತ್ತಿದ್ದು, ಅದನ್ನು ನಿಡಿ.12 ಎಂದು ಗುರುತಿಸಲಾಯಿತು. ಮ್ಯುಟೇಶನ ಎಂಟ್ರಿ ಸಂಖ್ಯೆ ಎಂ.ಆರ್.ನಂ.151/2009-10ನ್ನು ಹಾಜರುಪಡಿಸುತ್ತಿದ್ದು, ಅದನ್ನು ನಿಡಿ.13 ಎಂದು ಗುರುತಿಸಲಾಯಿತು. ಮ್ಯುಟೇಶನ ಎಂಟ್ರಿ ಸಂಖ್ಯೆ ಎಂ.ಆರ್.ನಂ.17905ರ ದೃಢೀಕೃತ ಪ್ರತಿಯನ್ನು ಹಾಜರುಪಡಿಸುತ್ತಿದ್ದು, ಅದನ್ನು ನಿಡಿ.14 ಎಂದು ಗುರುತಿಸಲಾಯಿತು. ಗ್ರಾಮ ಪಂಚಾಯತಿ ಮನೆ ನಂ.946ರ ಆಸ್ತಿ ಉತಾರ ಮತ್ತು ಕರ ರಶೀದಿಗಳನ್ನು ಹಾಜರುಪಡಿಸುತ್ತಿದ್ದು, ಅವುಗಳದನ್ನು ಕ್ರಮವಾಗಿ ನಿಡಿ.15 ಮತ್ತು ನಿಡಿ.16 ಎಂದು ಗುರುತಿಸಲಾಯಿತು. ರಿಗ್ ಅರ್ಜಿ ಸಂಖ್ಯೆ 105020/2014ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ 06-11-2014 ರಂದು ಮಾಡಿದ ಆದೇಶದ ದೃಢೀಕೃತ ಪ್ರತಿಯನ್ನು ಹಾಜರುಪಡಿಸುತ್ತಿದ್ದು, ಅದನ್ನು ನಿಡಿ.17 ಎಂದು ಗುರುತಿಸಲಾಯಿತು. ಆದ್ದರಿಂದ ದಾವೆಯಲ್ಲಿ ಕೇಳಿದಂತೆ ದಾವೆಯನ್ನು ವಜಾ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

***(ಈ ಹಂತದಲ್ಲಿ ವಾದಿಪರ ವಕೀಲರು ಪಾಟಿ ಸವಾಲು ಮಾಡಲು ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಿ ಮುಂದೂಡಲಾಯಿತು.)***

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು.)***

***ಓ. ಹೇ. ಕೇ. ಸರಿ ಇದೆ***

***ಹೆ. ಸಿವಿಲ್ ನ್ಯಾಯಾಧೀಶರು, ಕಾರವಾರ.***